**ಸೋಮವಾರಪೇಟೆ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಸಿಸಿ ನಂಃ 297/2025**

**ಪಿರ್ಯಾದಿ ಃ** ವಿಶ್ವನಾಥ.ಜಿ.ವಿ

**ಃವಿಃ**

**ಆರೋಪಿ ಃ** ಶರಣ್ ರಾಜ್.ಸಿ.ಜೆ

**ಆಪಾದನೆ**

**ಶ್ರೀ. ಶ್ರೀನಾಥ.ಜೆ.ಎನ್** ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ. ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

**ಆರೋಪಿ** ಃ ಶರಣ್ ರಾಜ್.ಸಿ.ಜೆ ತಂದೆಃ ಪೌತಿ ಗೋಪಾಲ, 45 ವರ್ಷ, ಸಂಜೀವಿನಿ ಶಾಲೆಯ ಹತ್ತಿರ, ಚೌಡ್ಲು ಗ್ರಾಮ ಮತ್ತು ಅಂಚೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

**ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೆನೆ.**

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಉತ್ತಮ ರೀತಿಯ ಸೌಹಾರ್ದ ಯುತವಾದ ಸಂಬಂಧವನ್ನು ಇಟ್ಟುಕೊಂಡಿದ್ದು, 22.02.2025 ರಂದು ಕುಟುಂಬದ ಕಾನೂನು ಬದ್ಧ ಅಗತ್ಯತೆಗಳಿಂದಾಗಿ ಸುಮಾರು ರೂ.4,00,000/-ಗಳ ಸಾಲವನ್ನು ಪಿರ್ಯಾದಿಯಿಂದ ಪಡೆದಿದ್ದೀರಿ, ನೀವು ಪಿರ್ಯಾದುದಾರರಿಗೆ ರೂ.4,00,000/-ಗಳನ್ನು ಕೊಡಬೇಕಾಗಿದ್ದು, ಸದರಿ ಹಣವನ್ನು ಆದಷ್ಟು ಬೇಗ ಮರುಪಾವತಿ ಮಾಡುವುದಾಗಿ ಆಶ್ವಾಸನೆ ನೀಡಿರುವಿರಿ, ಸದರಿ ಹಣದ ಮರುಪಾವತಿಗಾಗಿ ದಿನಾಂಕ 22.04.2025 ಅನ್ನು ನಮೂದಿಸಿ ಕರ್ನಾಟಕ ಬ್ಯಾಂಕ್ ಲಿ., ಸೋಮವಾರಪೇಟೆ ಶಾಖೆ, ಪೋಸ್ಟ್ ಡೇಟೆಡ್ ಚೆಕ್ ನಂಃ 021797 ರಲ್ಲಿ ರೂ.4,00,000/-ಗಳೆಂದು ಬರೆದು ಚೆಕ್ಕನ್ನು ಪಿರ್ಯಾದಿ ಹೆಸರಿಗೆ ನಗದಾಗುವಂತೆ ನೀಡಿರುತ್ತೀರಿ. ಪಿರ್ಯಾದಿ ಸದರಿ ಚೆಕ್ಕನ್ನು ಕರ್ನಾಟಕ ಬ್ಯಾಂಕ್ ಲಿ., ಸೋಮವಾರಪೇಟೆ ಶಾಖೆಗೆ ಹಾಜರುಪಡಿಸಿದಾಗ ಸದರಿ ಚೆಕ್ಕು "Funds insufficient" ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ. ನಂತರ ಕಾನೂನು ರೀತ್ಯಾ ದಿನಾಂಕ 07.05.2025 ರಂದು ನೋಂದಾಯಿತ ಹಾಗೂ ಜರೂರು ಅಂಚೆಯ ಮೂಲಕ ನಿಮಗೆ ನೋಟಿಸನ್ನು ನೀಡಿದರು ನೀವು ಹಣವನ್ನು ಪಾವತಿಸಿಲ್ಲ, ಆದರೆ ಯವುದೇ ಹಣ ಪಾವತಿ ಮಾಡಬೇಕಾಗಿರುವುದಿಲ್ಲ ಎಂದು ಮರು ಉತ್ತರವನ್ನು ನೀಡಿರುತ್ತೀರಿ, ಇದು 138, 142 ಎನ್.ಐ.ಕಾಯಿದೆ ಯನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿದ್ದೀರಿ.

**ಪ್ರಃ1 ಈಗ ಓದಿ ವಿವರಿಸಿದ ಅಪಾದನೆ ತಿಳಿದಿದೆಯಾ?**

**ಉಃ**

**ಪ್ರಃ2 ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?**

**ಉಃ**

**(ಮೇಲಿನ ಆರೋಪವನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ದಾಖಲಿಸಿಕೊಳ್ಳಲಾಯಿತು)**

ಸಹಿ/-

ದಿಃ **11.06.2026**

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಸೋಮವಾರಪೇಟೆ